ಓ.ಎಸ್ 212/2017 ಡಿ.ಡಬ್ಲು-1
ಕುಬೇರಪ್ಪ ತಂದೆ ಕುಪ್ಪಣ್ಣ

ದಿ.12-06-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲು ಶ್ರೀ ವಿ.ಪಿ.ಎಸ್.ಜೆ ವಕೀಲರಿಂದ :-**

ನನ್ನ ಸ್ವಂತ ಊರು ಲಿಂಗಸುಗೂರು. ನಮ್ಮ ತಂದೆಯ ಸ್ವಂತ ಕಸಬಾ-ಲಿಂಗಸುಗೂರು. ನಾನು ಈ ಪ್ರಕರಣದಲ್ಲಿ ಪಕ್ಷಗಾರನಲ್ಲ. ನಾನು ನನ್ನ ತಾಯಿಯ ಪರವಾಗಿ ಸಾಕ್ಷಿ ನುಡಿಯುತ್ತಿದ್ದೇನೆ. ನಮ್ಮ ತಾಯಿ ಜೀವಂತ ಇರುತ್ತಾರೆ. ಆರೋಗ್ಯವಾಗಿರುತ್ತಾರೆ ಎಂದರೆ ಸರಿಯಲ್ಲ. ಕಣ್ಣು ಸರಿಯಾಗಿ ಕಾಣಿಸುವುದಿಲ್ಲ ಮತ್ತು ಬೆನ್ನು ನೋವು ಇರುತ್ತದೆ. ನಮ್ಮ ತಾಯಿ ಆರೋಗ್ಯ ಸರಿ ಇಲ್ಲ ಎಂದು ತೋರಿಸಲು ದಾಖಲೆ ಹಾಜರು ಪಡಿಸಿರುವುದಿಲ್ಲ.

2. ನಮ್ಮ ತಂದೆಯ ಹೆಸರು ಕುಪ್ಪಣ್ಣ. ನಮ್ಮ ತಂದೆ ಪೌರ ಕಾರ್ಮಿಕರಾಗಿದ್ದರು. ಅವರು 25-30 ವರ್ಷ ಸೇವೆ ಸಲ್ಲಿಸಿರುತ್ತಾರೆ. ನಾನು ಬಿಲ್ ಕಲೆಕ್ಟರ್ ಆಗಿ ಪುರಸಭೆಯಲ್ಲಿ ಕೆಲಸ ಮಾಡುತ್ತಿದ್ದೇನೆ. ನಮ್ಮ ತಂದೆಯವರು ಬಡ್ತಿ ಹೊಂದಿ ಪಂಪ್ ಆಪರೇಟರ್ ಆಗಿದ್ದರು. ನಾನು 2015 ರಲ್ಲಿ ಸಿಂದನೂರಿನಲ್ಲಿ ಕೆಲಸ ಮಾಡಿ ಜುಲೈ-2017 ರಲ್ಲಿ ಲಿಂಗಸುಗೂರ ಪುರಸಭೆಗೆ ಬಂದಿರುತ್ತೇನೆ. ನಮ್ಮ ತಂದೆ ಬಿಲ್ ಕಲೆಕ್ಟರ್ ಹಿಂದೆ ಕರ ವಸೂಲಿ ಮಾಡಲು ಹೋಗುತ್ತಿದ್ದರು ಎಂದರೆ ಸರಿಯಲ್ಲ. ನಮ್ಮ ತಂದೆಯವರು ಪುರಸಭೆ ಅದ್ಯಕ್ಷರು ಮತ್ತು ಮುಖ್ಯಾಧಿಕಾರಿಗಳ ಜೊತೆ ಒಳ್ಳೆಯ ಒಡನಾಟ ಹೊಂದಿದ್ದರು ಎಂದರೆ ಸರಿ. ಆ ಕಾರಣಕ್ಕಾಗಿ ನಮ್ಮ ತಂದೆಯವರು ಪುರಸಭೆಯ ದಾಖಲೆಗಳನ್ನು ಬರೆಸಿರುವುದು ಮತ್ತು ತಿದ್ದಿಸುವುದು ಮಾಡುತ್ತಿದ್ದರು ಎಂದರೆ ಸರಿಯಲ್ಲ. ನಮ್ಮ ತಂದೆ 1ನೇ ತರಗತಿ ಓದಿರುತ್ತಾರೆ.

3. ವಾದಿ ನಿರ್ಮಲಾರವರ ಗಂಡ ಮರಿಯಪ್ಪ ನನಗೆ ಪರಿಚಯ ಇರುವುದಿಲ್ಲ. ಮರಿಯಪ್ಪರವರು ನಮ್ಮ ತಂದೆಯ ಜೊತೆ ಪುರಸಭೆಯಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ವಾದಿ ಮತ್ತು ಅವರ ಗಂಡ ಲಿಮಗಸುಗುರಿನಲ್ಲಿ ವಾಸವಾಗಿದ್ದರು ಎಂದರೆ ನನಗೆ ಗೊತ್ತಿಲ್ಲ. ಈ ದಾವೆಯನ್ನು ನಿರ್ಮಲಾ ಎನ್ನುವವರು ನಮ್ಮ ತಾಯಿಯ ವಿರುದ್ಧ ಹಾಕಿರುತ್ತಾರೆ. ನಮ್ಮ ತಾಯಿ ಈ ದಾವೆಯಲ್ಲಿ ಪ್ರತ್ಯೇಕ ತಕರಾರು ಸಲ್ಲಿಸಿರುವುದಿಲ್ಲ ಎಂದರೆ ಗೊತ್ತಿಲ್ಲ. ಸವಿಸ್ತಾರವಾದ ತಕರಾರು ನಮ್ಮ ತಾಯಿ ಹಾಕಿರುತ್ತಾರೆ. ತಕರಾರಿನಲ್ಲಿ ಏನೇನು ಬರೆದಿರುತ್ತಾರೆ ಎಂದು ನನಗೆ ಗೊತ್ತಿರುತ್ತದೆ. ನಮ್ಮ ತಾಯಿಗೆ 60 * 40 ಪ್ಲಾಟ್ ಎ.ಸಿ ರವರಿಂದ ಮಂಜೂರಾಗಿರುತ್ತದೆ.

4. ನಾನು ಎಸ್.ಎಸ್.ಎಲ್.ಸಿ ಓದಿರುತ್ತೇನೆ. ಎ.ಸಿ ರವರು ಮಂಜೂರು ಮಾಡಿದ ಆದೇಶದ ಪ್ರತಿಯಲ್ಲಿ ಸೈಟಿನ ವಿಸ್ತೀರ್ಣ ಪೂರ್ವ-ಪಶ್ಚಿಮ 40 ಮತ್ತು ಉತ್ತರ-ದಕ್ಷಿಣ 30 ಎಂದು ಬರೆದಿರುತ್ತದೆ. ನಿ.ಡಿ-10 ರಲ್ಲಿ ಇರುವ ಚೆಕ್ಕುಬಂದಿ ಸರಿ ಇರುತ್ತದೆ. ಸದರಿ ಸೈಟ್ಕರಡಕಲ್ ಗ್ರಾಮ ಸರ್ವೆ ನಂ. 395/1 ರ ಜಮೀನಿನಲ್ಲಿ ಬರುತ್ತದೆ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ..
ಲಿಂಗಸಗೂರು.